# ಎಳೆಯರ ಆಮೋದ

ದಸರಾ ರಜ ಬಂದಿತ್ತು. ಮಕ್ಕಳಿಗೆ ಸಂಭ್ರಮವೋ ಸಂಭ್ರಮ. ಬೀದಿಯ ಮಕ್ಕಳೆಲ್ಲ ರಸ್ತೆಗಿಳಿದಿದ್ದರು. ಕೆಲವರು ಕ್ರಿಕೆಟ್ ಆಡುತ್ತಿದ್ದರೆ ಕೆಲವರು ಫುಟ್‌ಬಾಲ್. ಚಿಕ್ಕಮಕ್ಕಳ ಇನ್ನೊಂದು ತಂಡ ಕಬಡಿ ಆಡುವುದರಲ್ಲಿ ಮಗ್ನವಾಗಿತ್ತು.

ಕ್ರಿಕೆಟ್ ಆಡುವವರ ಉತ್ಸಾಹ ವಿಶ್ವಕಪ್ ಕ್ರಿಕೆಟ್ ತಂಡಗಳಿಗಿಂತ ಕಡಮೆಯೇನಿರಲಿಲ್ಲ. ಅವರ ಚೀರಾಟ, ಅಭಿನಯ ಎಲ್ಲ ಪ್ರಖ್ಯಾತ ಆಟಗಾರರನ್ನು ಅನುಕರಿಸಿದಂತೆಯೇ ಇತ್ತು. ಎಷ್ಟೋ ಜನ ಹಿರಿಯರು ಬಾಲ್ಕನಿಗೆ ಬಂದು ಮಕ್ಕಳ ಆಟವನ್ನು ನೋಡುತ್ತಾ ತಮ್ಮ ಬಾಲ್ಯವನ್ನು ಜ್ಞಾಪಿಸಿಕೊಳ್ಳುತ್ತಿದ್ದರು. ಕೆಲವು ಅಜ್ಜಿಗಳು 'ಸಿಕ್ಸರ್ ಹೊಡೀ ಬೇಡ್ರೋ ಕಿಟಕಿ ಗಾಜು ಒಡದ್ರೆ ನೀವೇ ದಂಡ ಕೊಡಬೇಕು!' ಎಂದು ಎಚ್ಚರಿಸುತ್ತಿದ್ದರು. ಅದು ಮಕ್ಕಳ ಕಿವಿಗೇ ಬೀಳುತ್ತಿರಲಿಲ್ಲ. ಸಿಕ್ಸರ್ ಇಲ್ಲದ ಆಟ ಎಂಥ ಮಜ?

ಆಗ ಇದ್ದಕ್ಕಿದ್ದಂತೆಯೇ ಒಂದು ಕೋಗಿಲೆ ಹಾರಿ ಬಂದು ಚೆನ್ನಕೇಸರಿ ಮರದ ಮೇಲೆ ಕುಳಿತುಕೊಂಡಿತು. ಕುಹೂ ಕುಹೂ ಎಂದು ಹಾಡಿತು. ಅದನ್ನು ಕೇಳುತ್ತಿದ್ದಂತೆ ಮಕ್ಕಳ ಆಟ ಥಟ್ಟನೆ ನಿಂತಿತು. 'ಕೋಗಿಲೆ ಕೋಗಿಲೆ' ಎಂದು ಹೇಳುತ್ತಾ ಮರದ ಹೂಗೊಂಚಲಿನ ನಡುವೆ ಅವಿತಿದ್ದು ಹಾಡುತ್ತಿರುವ ಪಕ್ಷಿಯನ್ನು ಹುಡುಕತೊಡಗಿದರು. ಕೋಗಿಲೆ ಕೊಂಬೆಯಿಂದ ಕೊಂಬೆಗೆ ನುಸುಳುತ್ತಾ ಕೂಗುತ್ತಲೇ ಇತ್ತು. ಕೆಲವು ಹುಡುಗರು ಅದರಂತೆಯೇ ಕೂಗಿ ಪ್ರತಿಕ್ರಿಯೆಗಾಗಿ ಕಾದರು. ಒಬ್ಬ ಮಿಮಿಕ್ರಿ ಪರಿಣತ 'ಕುಹೂ ಕುಹೂ' ಎಂದು ಕೂಗಿದ. ಕೋಗಿಲೆಯೂ ಉತ್ತರ ಕೊಟ್ಟಿತು. ಎಲ್ಲರಿಗೂ ಖುಷಿಯಾಗಿ ತಾವೂ ಹಾಗೆ ಕೂಗಲು ಪ್ರಾರಂಭಿಸಿದರು. ಆಟ ನಿಂತೇ ಹೋಯಿತು.

ಅಷ್ಟರಲ್ಲಿ ಬೀದಿಯ ಕೊನೆಯಲ್ಲಿ ಯಾರೋ ಕೊಳಲು ನುಡಿಸುವುದು ಕೇಳಿಸಿತು. ಮಕ್ಕಳ ಗಮನವೆಲ್ಲ ಈಗ ಆ ಕಡೆಗೆ ತಿರುಗಿತು. ಒಬ್ಬ ಬಿಳಿ ಅಂಗಿ, ಪಂಚೆ ಧರಿಸಿದ ವ್ಯಕ್ತಿ. ತಲೆಗೆ ಒಂದು ಟವಲ್ ಸುತ್ತಿದ್ದ, ಹೆಗಲಿಗೊಂದು ಜೋಳಿಗೆ, ಕೊಳಲನ್ನು ತುಟಿಗೆ ಇಟ್ಟು ಯಾವುದೋ ಕೀರ್ತನೆ ನುಡಿಸುತ್ತಿದ್ದ. ಕೊಳಲಿನ ನಾದ ತುಂಬ ಮಧುರವಾಗಿತ್ತು. ಕೇಳುಗರನ್ನು ಮಂತ್ರಮುಗ್ಧರನ್ನಾಗಿಸುತ್ತಿತ್ತು.

ಮಕ್ಕಳೆಲ್ಲ ಅವನನ್ನೇ ನೋಡುತ್ತಾ ನಿಂತರು. ಅವನು ಕೊಳಲು ಊದುತ್ತಾ ಸಾವಧಾನವಾಗಿ ಇವರ ಕಡೆಯೇ ಬರುತ್ತಿದ್ದ. ಮನೆಗಳಿಂದ ಹೊರಬಂದ ಜನರು ಅವನ ಕೈಗೆ ಐದೋ ಹತ್ತೋ ರೂಪಾಯಿ ಕೊಡುತ್ತಿದ್ದರು. ಅವನು ಅವರಿಗೆ ಕೈಜೋಡಿಸಿ ಮತ್ತೆ ಕೊಳಲು ನುಡಿಸುವುದನ್ನು ಮುಂದುವರಿಸುತ್ತಿದ್ದ.

ಅವನು ಮಕ್ಕಳ ಗುಂಪಿನ ಬಳಿಗೆ ಬರುವ ಹೊತ್ತಿಗೆ ಸರಿಯಾಗಿ ಕೋಗಿಲೆ 'ಕುಹೂ ಕುಹೂ' ಎಂದು ಕೂಗಿತು. ಕೊಳಲು ವಾದಕ ಹಾಡು ನಿಲ್ಲಿಸಿ, ಕೊಳಲಿನಲ್ಲೇ ಕೋಗಿಲೆಯ ಧ್ವನಿಯನ್ನು ಅನುಕರಿಸಿ ನುಡಿಸಿದ. ಅದು ಎಷ್ಟು ಚೆನ್ನಾಗಿತ್ತೆಂದರೆ ಕೋಗಿಲೆಯೂ ಮೋಸಹೋಯಿತು. ಇನ್ನೊಂದು ಕೋಗಿಲೆ ಬಂದಿರಬೇಕೆಂದು ಭ್ರಮಿಸಿ ತಾನೂ 'ಕುಹೂ ಕುಹೂ' ಎಂದು ಕೂಗಿತು. ಕೊಳಲು ವಾದಕ ಮತ್ತೆ ನುಡಿಸಿದ. ಕೋಗಿಲೆ ಮತ್ತೆ ಉತ್ತರ ಕೊಟ್ಟಿತು. ಈ ಜುಗಲಬಂದಿ ಐದು ಹತ್ತು ನಿಮಿಷ ನಡೆಯಿತು. ಮಕ್ಕಳೆಲ್ಲ ಮೂಕವಿಸ್ಮಿತರಾಗಿ ನಿಂತರು.

'ನಾವೂ ಕೊಳಲು ನುಡಿಸಿದರೆ ಕೋಗಿಲೆ ನಮಗೂ ಉತ್ತರ ಕೊಡುತ್ತಾ?' ಎಂದು ಒಬ್ಬ ಹುಡುಗ ಕೇಳಿದ.

'ಓಹೋ ಅದರ ಹಾಗೇ ಶಬ್ದ ಹೊರಡಿಸಬೇಕು. ಆಗ ಅದೂ ಉತ್ತರ ಕೊಡುತ್ತೆ' ಎಂದ ಕೊಳಲು ವಾದಕ. ಒಬ್ಬ ಹುಡುಗನ ಕೈಗೆ ತನ್ನ ಕೊಳಲು ಕೊಟ್ಟ. ಹುಡುಗ ಕೊಳಲಿಗೆ ಉಸಿರು ತುಂಬುತ್ತಾ